ಅಧಿಕಾರಿಗಳಿಗೆ ಹೇಳಿದ್ದೇನೆ. ತಮ್ಮ ಅನಿಸಿಕೆಗಳಿಗೆ ಸರ್ಕಾರ ಸ್ಪಂಧಿಸುತ್ತದೆ. ಅದರಲ್ಲಿ ಇದ್ದರೂ ಇರಬಹುದು, ನಿಮಗೆ ಬಂದಿರತಕ್ಕ ಮಾಹಿತಿ ತಪ್ಪು ಎಂದು ನಾನು ಹೇಳಲಿಕ್ಕೆ ತಯಾರಿಲ್ಲ. ಅನೇಕ ಸೂಕ್ಷ್ಮವಾದ ವಿಚಾರಗಳನ್ನು ನಾನು ಹೇಳಲಿಕ್ಕಾಗುವುದಿಲ್ಲ. ದಯವಿಟ್ಟು ನಮ್ಮ ಮೇಲೆ ವಿಶ್ವಾಸ ಇಡಬೇಕೆಂದು ದೇಳಿ ತಮ್ಮ ಮೂಲಕ ಮಾನ್ಯ ಶ್ರೀರಾಮರೆಡ್ಡಿಯವರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಧ್ಯಕ್ಷರು ತಮ್ಮಕ್ಷೇತ್ರದಲ್ಲಿ ನಡೆದಿರತಕ್ಕ ಘಟನೆಯ ಬಗ್ಗೆ ವಿಶೇಷವಾಗಿ ದುರ್ಬಲ ವರ್ಗದವರು ಮತ್ತು ಬಡವರ ಮೇಲೆ ಅನ್ಯಾಯವಾಗಿದೆ ಅವರಿಗೆ ನೋವಾಗಿದೆಯೆನ್ನುವ ದೃಷ್ಟಿಯಿಂದ ಅವರ ಮನಸ್ಸಿಗೆ ನೋವಾಗಿದೆಯೇ ಹೊರತು ಸರ್ಕಾರವಾಗಲೀ ಅಥವಾ ಈ ಸದನವಾಗಲೀ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮದ ಬಗ್ಗೆ ಅವರಿಗೇನೂ ನೋವು ಇಲ್ಲ.ಜಿಲ್ಲಾ ಮಂತ್ರಿಗಳು ತುರ್ತಾಗಿ ಹೋಗಿದ್ದಾರೆ. ಗೃಹ ಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಎಲ್ಲಾ ಉನ್ನತಮಟ್ಟದ ಅಧಿಕಾರಿಗಳು ಹೋಗಿದ್ದಾರೆ. ಮಾನ್ಯ ಸಭಾಧ್ಯಕ್ಷರಿಗೆ ನಾನು ಎಲ್ಲಾ ವಿಚಾರಗಳನ್ನು ಎಲ್ಲಾ ಹಂತಗಳಲ್ಲಿ ಸಹಿತ ನಾನು ತಿಳಿಸಿದ್ದೇನೆ. ಅವರಿಗೆ ಬಹಳ ನೋವು ಇದೆ. ನೋವಿಗೆ ಕಾರಣ, ಇಂತಹ ಜನಗಳಿಗೆ ನನ್ನ ಕ್ಷೇತ್ರದಲ್ಲಿ ಹೀಗೆ ಆಯಿತಲ್ಲವೆಂದು ಅವರಿಗೆ ನೋವು ಇದೆಯೇ ಹೊರತು ಸರ್ಕಾರದ ಬಗ್ಗೆ ಅಲ್ಲವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ, ಗೌರವಾನ್ವಿತ ಎಲ್ಲಾ ಸದಸ್ಯರುಗಳು ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಒಂದು ವಿಚಾರಣೆಯಾಗಬೇಕೆಂದು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ನಾವು ಸರ್ಕಾರದಲ್ಲಿ ಯಾರನ್ನೂ ಬಚ್ಚಿಡಬೇಕು ಯಾರಿಗೋ ಉಪಯೋಗ ಮಾಡಿಕೊಡಬೇಕೆನ್ನುವ ವಿಚಾರವಿಲ್ಲ, ಇದರ ಬಗ್ಗೆ ತನಿಖೆ ಮಾಡಲು ಒಂದು ಮ್ಯಾಜಿಸ್ಟೇರಿಯಲ್ ಎನ್‌ಕ್ವಾಯರಿ ಮಾಡಲಿಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡುತ್ತದೆ ಎನ್ನುವುದನ್ನು ಸಹಿತ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಆಯಿತಲ್ಲ ಬಿಡಿರಿ, ಈಗ ಈ ವಿಷಯವನ್ನು ಇಲ್ಲಿಗೆ ಮುಗಿಸಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ.

ಕ್ರಿಕೆಟ್ ಟಿಕೆಟ್ ಅವ್ಯಾವಹಾರ ಕುರಿತು.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಕ್ರಿಕೆಟ್ ವಿಷಯದ ಬಗ್ಗೆ ಪ್ರಸ್ತಾಪ ಮಾಡತ್ತೇನೆಂದು ತಮಗೆ ಬರೆದು ಕೊಟ್ಟಿದ್ದೇನೆ. ನಾನು ನಿನ್ನೆ ನಡೆದಂತಹ ಕ್ರಿಕೆಟ್ ಟಿಕೆಟ್ ವಿತರಣೆಯ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ.

ಉಪಾಧ್ಯಕ್ಷರು : ನಾನು ಹೇಳುವುದನ್ನು ಕೇಳಿ, ನೀವು ಹೇಳಿದ್ದು ಅಷ್ಟೇ ಕೇಳಬೇಕು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದು ಅನೇಕ ಜನ ತಮ್ಮಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಒಂದು ಗಂಟೆಗೆ ಬಜೆಟ್ ಭಾಷಣ ಶುರುವಾಗುತ್ತದೆ. ಒಂದು ಗಂಟೆಯೊಳಗಾಗಿ ಯಾರಾದರೂ 10-10 ನಿಮಿಷ ಮಾತನಾಡುವುದಾದರೆ ಅದಕ್ಕೆ ಅವಕಾಶವಾಗುತ್ತದೆ. ಇಲ್ಲವೆಂದರೆ ಅದನ್ನು ಕಟ್ ಮಾಡಬೇಕಾಗುತ್ತದೆ. ಅದಕ್ಕೆ ಸನ್ಮಾನ್ಯ ಸದಸ್ಯರೆಲ್ಲರೂ ಒಪ್ಪಿದಿರಿ ಅಂದರೆ ಒಂದು

ಗಂಟೆಯೊಳಗಾಗಿ ನೀವು ಏನಾದರೂ ಚರ್ಚೆಮಾಡಲಿಕ್ಕೆ ಅವಕಾಶ ಕೊಡುತ್ತೇನೆ. ಆದರೆ ಈ ವಿಷಯ ಪ್ರಸ್ತಾಪ ಮಾಡಲಾರದೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಕ್ಕೆ ಪ್ರಾರಂಭ ಮಾಡೋಣ. ಪ್ರಾರಂಭ ಮಾಡಿ ಹತ್ತತ್ತು ನಿಮಿಷ ಮಾತನಾಡಬೇಕು. ಅದು ಎಲ್ಲರೂ ಮಾತನಾಡಲಿಕ್ಕೆ ಸಾಧ್ಯವಾಗುವುದಿಲ್ಲ. 8 ಜನ ಸದಸ್ಯರು ಮಾತನಾಡಬೇಕೆಂದು ಅಪೇಕ್ಷೆ ಪಟ್ಟಿದ್ದಾರೆ. ಅದನ್ನು ಮುಗಿಸಿದ ಮೇಲೆ ಬೇರೆ ವಿಷಯಕ್ಕೆ ಹೋಗೋಣ.

ಶ್ರೀ ಎ. ರಾಮದಾಸ್: ಮಾನ್ಯ ಉಪಾಧ್ಯಕ್ಷರೆ, ನಾನು ಏನೂ ಕೇಳುತ್ತಿಲ್ಲ. ಈಗ ಏನು ಸಾರ್ವಜನಿಕರಿಗೆ ನೋವಾಗಿದೆ, ಅದಕ್ಕೆ ಸರ್ಕಾರ ಮತ್ತೆ ಟಿಕೆಟ್ ಕೊಡುವತಂಹ ವ್ಯವಸ್ಥೆಯಾಗುತ್ತದೆಂದು ಹೇಳಿದರೆ ಸಾಕು. ಅದನ್ನು ಬಿಟ್ಟು ನಾನು ಬೇರೆ ಪ್ರಸ್ತಾಪ ಮಾಡುತ್ತಿಲ್ಲ. ಕಾರಣ ಏನೆಂದರೆ, ಇವತ್ತಿನಿಂದ ಸಾರ್ವಜನಿಕರಿಗೆ ಟಿಕೆಟ್ ಕೊಡುವುದನ್ನು ನಿಲ್ಲಿಸಿದ್ದೇವೆಂದು ಘೋಷಣೆ ಮಾಡಿದ್ದಾರೆ. ಆದರೆ ಈಗಾಗಲೇ ಸರ್ಕಾರ ಘೋಷಣೆ ಮಾಡಿದ ರೀತಿಯಲ್ಲಿ ಶೇಕಡ 50 ಭಾಗ ಅಂದರೆ 25 ಸಾವಿರ ಟಿಕೆಟ್‌ಗಳನ್ನು ಸಾರ್ವಜನಿಕರಿಗೆ ಕೊಡುತ್ತೇವೆಂದು ಘೋಷಣೆಯನ್ನು ಮೂಡಿದ್ದರಿಂದ ಇಡೀ ರಾತ್ರಿ ಜನ ಕ್ಯೂನಲ್ಲಿ ನಿಂತಿದ್ದರು. ಆದರೆ ಬೆಳಗಿನವರೆಗೆ ಕೇವಲ 9 ಸಾವಿರ ಟಿಕೆಟ್‌ಗಳನ್ನು ಅದರಲ್ಲಿ 4 ಸಾವಿರ ಟಿಕೆಟ್‌ಗಳನ್ನು ಕೇವಲ 100 ರೂಪಾಯಿ ಟಿಕೆಟ್‌ಗಳನ್ನು ಕೊಟ್ಟು, ಪಾಕಿಸ್ತಾನ ಮತ್ತು ಭಾರತ ಎರಡರ ನಡುವೆ ಕ್ವಾರ್ಟರ್ ಫೈನಲ್ ನಡಯುತ್ತದೆ ಎನ್ನುವುದು ಗೊತ್ತಾದ ಮೇಲೆ ಹೆಚ್ಚಿನ ಬೆಲೆಗೆ ಟಿಕೆಟ್ ಮಾರಾಟವಾಗುತ್ತದೆನ್ನುವುದು ಗೊತ್ತಾದ ತಕ್ಷಣ. ಅಲ್ಲಿನ ಅಧಿಕಾರಿಗಳು ಕಾಳಸಂತೆಯಲ್ಲಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆನ್ನುವ ವಿಚಾರ ಎಲ್ಲರಿಗೂ ಗೊತ್ತಿರುವುದರಿಂದ, ಸರ್ಕಾರ ಇದರ ಬಗ್ಗೆ ಏನು ಕ್ರಮವನ್ನು ಕೈಗೊಂಡಿದೆ? ಉಳಿದಿರುವಂತಹ 16 ಸಾವಿರ ಟಿಕೆಟ್‌ಗಳನ್ನು ಸಾರ್ವಜನಿಕರಿಗೆ ಕೊಡುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆಯೆಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಕ್ರೀಡಾ ಮಂತ್ರಿಗಳು ಏನು ಹೇಳುತ್ತೀರಿ ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೆ, ನಾನೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ತಮಗೆ ಬರೆದು ಕೊಟ್ಟಿದ್ದೇನೆ. ಇದರ ಬಗ್ಗೆ ದಿನಾಂಕ 16-3-96ರಲ್ಲಿ ರಿಜಿಸ್ಟರ್ ಆಫ್ ಕೊ ಆಪರೇಟಿವ್ ಸೊಸೈಟೀಸ್‌ಗೆ ನಾನು ಅಪ್ಲಿಕೇಶನ್ ಅನ್ನು ಜೊಡಾಮಣಿ ನಾಗೇಂದ್ರ ಎನ್ನುವರ ಪರವಾಗಿ ಕೊಟ್ಟಿದ್ದೇನೆ. ಇದರ ಬಗ್ಗೆ ಏನೇನು ಅನ್ಯಾಯವಾಗುತ್ತಿದೆ, ಏನು ಅಕ್ರಮಣವಾಗುತ್ತದೆಯೆನ್ನುವ ಬಗ್ಗೆ ಅಪ್ಲೇಕೇಶನ್ ಕೊಟ್ಟಿದ್ದೇನೆ. 16-2-96ರಲ್ಲಿ ಕೊಟ್ಟು ಇದರ ಬಗ್ಗೆ ಕೂಲಂಕಷವಾಗಿ ಎನ್ ಕ್ವಾಯಂ ಮಾಡಬೇಕೆಂದು ಹೇಳಿದ್ದೇನೆ. ಅಷ್ಟೇ ಅಲ್ಲ ಸುಪ್ರೀಂಕೋರ್ಟ್ ತೀರ್ಮಾನ, ಮಿನಿಸ್ಟ್ರಿ ಆಫ್ ಇನ್ ಫರ್ಮೇಶನ್ ಅಂಡ್ ಬ್ರಾಡ್ ಕಾಸ್ಟಿಂಗ್ ಗೌರ್ನಮೆಂಟ್ ಆಫ್ ಇಂಡಿಯಾ ಮತ್ತು ಬೆಂಗಾಲ್ ಕ್ರಿಕೆಟ್ ಅಸೋಸಿಯೇಷನ್ನಲ್ಲಿ ತೀರ್ಮಾನ ಆದಂತಹ ಪ್ರಕರಣದಲ್ಲಿ ಕ್ರಿಕೆಟ್ ನೋಡತಕ್ಕ ಸಾರ್ವಜನಿಕರಿದು ಮೂಲಭೂತ ಹಕ್ಕುಯೆಂದು ಹೇಳಿ ಸುಪ್ರೀಂಕೋರ್ಟ್ ಈಗಾಗಲೇ ತೀರ್ಮಾನ ಕೊಟ್ಟಿದೆ. ಅಂದರೆ ಸಾರ್ವಜನಿಕರಿಗೆ ಟಿಕೆಟ್ ಕೊಡಿ, ಇವತ್ತು ಸಾರ್ವಜನಿಕರಿಗೆ ಇರತಕ್ಕ ಹಕ್ಕನ್ನು ಕಿತ್ತುಕೊಂಡು ಕ್ರಿಕೆಟ್ ಅಸೋಸಿಯೇಷನ್ ಏನು ಅನ್ಯಾಯ ಮಾಡುತ್ತಿದೆಯೆನ್ನುವುದರ ಬಗ್ಗೆ ಈಗಾಗಲೇ ಅರ್ಜಿ ಮುಖಾಂತರ

ಕೊಟ್ಟಿದ್ದೇನೆ. ಅದರ ಬಗ್ಗೆ ಎನ್‌ಕ್ವಾಯರಿ ಮಾಡಿಯೆಂದು ಕೇಳಿದ್ದೇನೆ. ಇಮವರೆಗೂ ಕೂಡ ಅದಕ್ಕೆ ಉತ್ತರ ಬಂದಿಲ್ಲ. ಅದರ ಬಗ್ಗೆ ಏನ್ ಕ್ವಾಯರಿ ಮಾಡಿಲ್ಲ. ನನ್ನ ಗಮನಕ್ಕೆ ಬಂದಿರುವಂತೆ ಇವತ್ತು ಶ್ರೀಮಾನ್ ರವಿಶಾಸ್ತ್ರಿ ಏನ್ನುವವರಿಗೆ 800 ಟಿಕೆಟುಗಳು, ಒಂದು ಟಿಕೆಟ್‌ಗೆ 60 ಡಾಲರ್ ನಂತೆ ಕಂಪ್ಲೀಟ್ ಬಿಇಎಂಎಲ್ ಮಿಂಗ್ ಪೂರ್ತಿ ಕೊಟ್ಟಿದ್ದಾರೆ. ಯಾರು ಕೊಟ್ಟರು? ಇವತ್ತು ಸರ್ಕಾರದಿಂದ ಎಷ್ಟು ಅನುಕೂಲ ಮಾಡಿಕೊಟ್ಟಿದ್ದೀರಿ ಕ್ರಿಕೆಟ್ ಅಸೋಸಿಯೇಷನ್‌ಗೋಸ್ಕರ ಅದು ನಿಮಗೆ ಗೊತ್ತಿದೆ. ಲಾ ಅಂಡ್ ಆರ್ಡರ್ ಕರೆಂಟ್ ಕೊಡುವುದಕ್ಕೆ, ನೀರಿನ ವ್ಯವಸ್ಥೆ ಮಾಡಿದ್ದೀರಿ. ಇಷ್ಟಾದರೂ ಸಹ ಒಂದು ವಿಂಗ್‌ಗೆ ಒಬ್ಬ ಮನಷ್ಯನಿಗೆ 800 ಟಿಕೆಟ್ ಕೊಟ್ಟಿದ್ದಾರೆ. ಅದೇ ರೀತಿ ಶ್ರೀಮಾನ್ ಗಾವಸ್ಕರ್‌ರವರಿಗೂ ಕೂಡ ಒಂದು ವಿಂಗನ್ನು ಕೊಟ್ಟಿದ್ದಾರೆಂದು ನಾನು ಕೇಳಿಪಟ್ಟಿದ್ದೇನೆ. ಮೆಂಬರ್‌ಗಳಿಗೆ ಅಂದರೆ 4 ಸಾವಿರ ಸದಸ್ಯರುಗಳಿಗೆ ತಮ್ಮ ಹೆಂಡತಿಗೆ ಒಬ್ಬೊಬ್ಬರಿಗೆ ಸ್ಟಾಸ್‌ಗೆಯೆಂದು ಹೇಳಿ ಒಂದೊಂದು ಟಿಕೆಟನ್ನು ರಿಸರ್ವ ಮಾಡಿದ್ದಾರೆ. ಒಬ್ಬ ಸದಸ್ಯರಿಗೆ ಎರಡು ಗೆಸ್ಟ ಟಿಕೆಟ್‌ಯೆಂದು ಹೇಳಿ ಅವರುಗಳಿಗೆ ಸದಸ್ಯರುಗಳಿಗೆ ಕೊಟ್ಟಿದ್ದಾರೆ.

ಶ್ರೀ ಸಿ. ಜೈರೇಗೌಡ : ನಿಮಗೆ ಎಷ್ಟು ಕೊಟ್ಟಿದ್ದಾರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಮೆಂಬರೂ ಅಲ್ಲ, ನಾನು ಟಿಕೆಟ್ ಕೇಳುವುದೂ ಇಲ್ಲ. ಸದಸ್ಯರುಗಳಿಗೆ ಅವರ ಹೆಂಡತಿಯರಿಗೆಂದು ಹೇಳಿ 4 ಸಾವಿರ ಟಿಕೆಟ್. ಗೆಸ್ಟಗಾಗಿ ಒಬ್ಬೊಬ್ಬರಿಗೆ ಎರಡು ಟಿಕೆಟ್‌ಯೆಂದು ಹೇಳಿ ಸರ್ಕ್ಯುಲರ್ ಇಸ್ಯೂ ಮಾಡಿದ್ದಾರೆ. ಸರ್ಕ್ಯುಲರನ್ನು ಕೊಟ್ಟಿದ್ದೇನೆ. ರಿಜಿಸ್ಟ್ರಾರ್ ಆಫ್ ಸೊಸೈಟೀಸ್‌ಗೆ 16-2-96ರಲ್ಲಿ ಈ ರೀತಿ ಅಕ್ರಮವಾಗಿದೆಯೆನ್ನುವುದನ್ನು ಕೊಟ್ಟಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಧ್ಯಕ್ಷರೆ, ಕ್ರಿಕೆಟ್ ಅಸೋಸಿಯೇಷನ್ ಇಟ್ ಈಸ್ ಎ ರಿಜಿಸ್ಟರ್ ಬಾಡಿ. ಯಾವ್ಯಾವ ಕಂಡೀಷನ್ ಅದು ಅವರಿಗೆ ಬಿಟ್ಟಿದ್ದುದು. ಆಕಸ್ಮಾತ್ ಏನಾದರೂ ಕಾನೂನು ಮುರಿದು ಅವರು ಕೊಟ್ಟಿದ್ದರೆ ಅದನ್ನು ನಾವು ಮಾಡಬೇಕು. ಟಿಕೆಟ್ ಮಾರುವುದಕ್ಕೆ ಸರ್ಕಾರ ಹೋಗಿದೆಯೇ.

ಶ್ರೀಮತಿ ಪ್ರಮಿಳಾನೇಸರ್ಗಿ : ರಿಜಿಸ್ಟಾರ್ ಆಫ್ ಸೊಸೈಟೀಸ್‌ನಲ್ಲಿ ಇದು ರಿಜಿಸ್ಟರ್ ಆಗಿರತಕ್ಕ ಸಂಸ್ಥೆ. ಆದುದರಿಂದ ರಿಜಿಸ್ಟಾರ್‌ಗೆ ಇದರ ಬಗ್ಗೆ ಎನ್‌ಕ್ವಾಯರಿ ಮಾಡತಕ್ಕ ಅಧಿಕಾರ ಸೆಕ್ಷನ್ 25 ರಲ್ಲಿದೆ. ಅಕ್ರಮವಾಗತಕ್ಕ ಸಂದರ್ಭದಲ್ಲಿ ಎನ್ ಕ್ವಾಯರಿ ಮಾಡುವುದಕ್ಕೆ ಅಧಿಕಾರವಿದೆ. ಮಾನ್ಯ ಉಪಧ್ಯಕ್ಷರೆ, ಮೊನ್ನೆ ರಾತ್ರಿ 9 ಗಂಟೆಯಿಂದ ಬೆಳಿಗ್ಗೆಯವರೆಗೆ ಕ್ಯೂನಲ್ಲಿ ಹುಡುಗರು ಸಣ್ಣ ಮಕ್ಕಳು ನಿಂತಿದ್ದಾರೆ. ಐದಾರು ವರ್ಷದ ಹುಡುಗರು ಟಿಕೆಟ್ ಗೋಸ್ಕರ ಕ್ಯೂನಲ್ಲಿ ನಿಂತುಕೊಂಡಿದ್ದಾರೆ. ನಿನ್ನೆ ಬೆಳಿಗ್ಗೆ 8 ಗಂಟೆಗೆ ಕೌಂಟನ್ನು ಓಪನ್ ಮಾಡಿ 9 ಗಂಟೆಗೆ ಕ್ಲೋಸ್ ಮಾಡಿದ್ದಾರೆ. ಅವರು ಏನು ಮಾಡಿದ್ದಾರೆಂದರೆ 400 ರೂಪಾಯಿಗಳ 345 ಟಿಕೆಟ್ ಮಾರಿರತಕ್ಕದ್ದು. 400 ರೂಪಾಯಿಗಳ 345 ಟಿಕೆಟ್ ಮಾರಿರತಕ್ಕದ್ದು. 400 ರೂಪಾಯಿಗಳ 345 ಟಿಕೆಟ್ ಮಾರಾಟ ಮಾಡಿ ಕೌಂಟರ್ ಕ್ಲೋಸ್ ಮಾಡಿದ್ದಾರೆ. 600 ರೂಪಾಯಿಗಳ 402 ಟಿಕೆಟ್‌ಗಳನ್ನು ಕೊಟ್ಟು ಕ್ಲೋಸ್ ಆಯಿತೆಂದು ಹೇಳಿದ್ದಾರೆ. 800 ರೂಪಾಯಿಗಳ 835 ಟಿಕೆಟ್‌ಗಳನ್ನು ಕೊಟ್ಟು ಕ್ಲೋಸ್ ಮಾಡಿದ್ದೇವೆಂದು ಹೇಳಿದ್ದಾರೆ. 150 ರೂಪಾಯಿಗಳ 1200

ಟಿಕೆಟ್‌ಗಳನ್ನು ಕೊಟ್ಟು ಕ್ಲೋಸ್ ಮಾಡಿದ್ದೇವೆಂದು ಹೇಳಿದ್ದಾರೆ. 100 ರೂಪಾಯಿಗಳ 5 ಸಾವಿರ ಟಿಕೆಟ್‌ಗಳನ್ನು ಕೊಟ್ಟು ಕ್ಲೋಸ್ ಮಾಡಿದ್ದೇವೆಂದು ಹೇಳಿದ್ದಾರೆ. ಒಟ್ಟು ಸಾವಿರ ಮತ್ತು ಎರಡುಸಾವಿರ ಐನೂರು ಟಿಕೆಟ್ ಎರಡೂ ಸೇರಿ 9 ಸಾವಿರ ಟಿಕೆಟ್‌ಗಳನ್ನು ಕೊಟ್ಟೇದ್ದೇವೆಂದು ಹೇಳಿದ್ದಾರೆ. ಸಾರ್ವಜನಿಕರಿಗೆ 35 ಸಾವಿರ ಟಿಕೆಟ್‌ಗಳನ್ನು ಇಟ್ಟೇದ್ದೇವೆಂದು ಹೇಳಿದ್ದಾರೆ. ಆದರೆ ವಾಸ್ತವಿಕರಾಗಿ ಅಲ್ಲಿ ಸಾರ್ವಜನಿಕರಿಗೆ ಟಿಕೆಟ್ ಸಿಕ್ಕಿಲ್ಲ. ಮಕ್ಕಳಿಗೆ ಟಿಕೆಟ್ ಸಿಕ್ಕಿಲ್ಲ. ಇಂತಹ ಅನ್ಯಾಯ, ಅಕ್ರಮವಾಗಿರುವುದರಿಂದ ಈ ಸದನ ರಿಜಿಸ್ಟಾರ್ ಆಫ್ ಸೊಸೈಟೀಸ್‌ಗೆ ಅಧಿಕಾರವಿರುವುದರಿಂದ, ನಮ್ಮ ಸರ್ಕಾರಕ್ಕೆ ಅಧಿಕಾರವಿರುವುದರಿಂದ ಇದರ ಬಗ್ಗೆ ಕೂಲಂಕುಷವಾಗಿ ಎನ್‌ಕ್ವಾಯರಿ ಮಾಡಿ ತಕ್ಷಣ ಸಾರ್ವಜನಿಕರಿಗೆ ಟಿಕೆಟ್‌ಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡದಿದ್ದರೆ ಬಹಳ ಗಲಾಟೆಗಳು ಮತ್ತು ಅವ್ಯವಸ್ಥೆಯಾಗುವುದನ್ನು ನಾವು ನೋಡಬೇಕಾಗುತ್ತದೆ. ಹೋದಸಾರಿಯೂ ಅಕ್ರಮವಾಗಿದೆ, ಇದರ ಬಗ್ಗೆ ಕೂಡ ನಾವು ಏನೂ ಮಾಡಿಲ್ಲ. ಈಗ ಜನಗಳು ಎಷ್ಟು ರೊಚ್ಚಿಗೆದ್ದಿದ್ದಾರೆಂದರೆ ಕ್ರಿಕೆಟ್ 9ನೇ ತಾರೀಖು ನಡೆಯುವುದಕ್ಕೆ ಏನೇನು ಅನುಕೂಲಗಳು ಬೇಕಾಗಿತ್ತೋ ಅವುಗಳನ್ನೆಲ್ಲ ಕೊಟ್ಟರೂ ಕೂಡ ಈ ಅವ್ಯವಹಾರಗಳಿಂದ ಜನಗಳಿಗೆ ಅನ್ಯಾಯವಾಗಿದೆ ಇದರ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಮಾಹಿತಿಯನ್ನು ತರಿಸಿ ನಮಗೆ ಉತ್ತರ ಕೊಡಬೇಕಾಗುತ್ತದೆ. ಸಾರ್ವಜನಿಕರಿಗೋಸ್ಕರ ಎಷ್ಟು ಟಿಕೆಟ್‌ಗಳನ್ನು ತಾವು ತಾವೇ ಹಂಚಿಕೊಂಡಿದ್ದಾರೆ? ಸಾರ್ವಜನಿಕರಿಗೆ ಅದು ಎಷ್ಟೆಂದು ಹೇಳಬೇಕಲ್ಲ? ಅಲ್ಲಿ ಟಿಕೆಟ್ ಕ್ಲೋಸ್ ಆಗಿದೆಯೆಂದು ಹೇಳುತ್ತಿದ್ದಾರೆ. ಅದುದರಿಂದ ಅದರ ಬಗ್ಗೆ ಉತ್ತರ ಕೊಡಿಯೆಂದು ಕೇಳುತ್ತಿದ್ದೇನೆ. ನಮಗೆ ಬೇಕಾಗಿಲ್ಲ ಸ್ವಾಮಿ, ಎಂ.ಎಲ್.ಎ. ಗಳಿಗೂ ಕೊಡಬೇಡಿ, ಯಾರಿಗೂ ಕೊಡಬೇಡಿ, ಸಾರ್ವಜನಿಕರಿಗೆ ಕೊಡಿ. ಅನ್ಯಾಯವಾಗಿರುವುದನ್ನು ತಪ್ಪಿಸಿ. ಎಂ.ಎಲ್.ಎ.ಗಳು ಬೇಕಾದರೆ ದುಡ್ಡು ಕೊಟ್ಟು ಹೋಗಲಿ. ಸಾರ್ವಜನಿಕರಿಗೆ ಅನ್ಯಾಯವಾಗಿರುವುದನ್ನು ತಪ್ಪಿಸಿ. ಕ್ರಿಕೆಟ್ ಆಟ ನೋಡುವವರು ಯಾರು? ನೀವು ನಾವು ಅಲ್ಲ. ಮಕ್ಕಳು ನೋಡುವವರು ಅವರಿಗೆ ಅನ್ಯಾಯವಾಗಿರುವುದನ್ನು ತಪ್ಪಿಸಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಒಂದು ವಿಚಾರ. ಇಲ್ಲಿ ಪತ್ರಿಕೆಯಲ್ಲಿ ಬಂದಿದೆ. ಮಂತ್ರಿಗಳೆಲ್ಲ ಸಾವಿರಾರು ಟಿಕೇಟುಗಳನ್ನು ತರಿಸಿಕೊಂಡಿದ್ದಾರೆ. ಕೆಲವು ಉನ್ನತ ಸರ್ಕಾರಿ ಅಧಿಕಾರಿಗಳು ಸಾವಿರಾರು ಟಿಕೇಟ್ಟುಗಳನ್ನು ತರಿಸಿ ಕಾಳಸಂತೆಯಲ್ಲಿ ಅವರು ಶಾಮಿಲಾಗಿ ಮಾರಾಟ ಮಾಡುತ್ತಿದ್ದಾರೆ, ಎನ್ನುವಂಥಾದ್ದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸಾವಿರಾರು ಜನ ಅಮಾಯಕರು ಕ್ಯೂನಲ್ಲಿ ನಿಂತುಕೊಂಡಾಗ ಲಾಠಿ ಚಾರ್ಜ್‌ಮಾಡಿ, ಅವರ ಮೇಲೆ ಹಲ್ಲೆ ಮಾಡುವಂಥ ಪ್ರಯತ್ನ ಪೋಲೀಸರ ಕಡೆಯಿಂದ ಆಗಿದೆ. ದಯವಿಟ್ಟು ಈ ರೀತಿಯ ಪ್ರಯತ್ನ ಆಗಬಾರದು, ಈರೀತಿಯ ವ್ಯವಸ್ಥೆ ನಿರ್ಮಾಣವಾಗಬಾರದು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನನಗೆ ಬಂದಿರತಕ್ಕಂಥ ಒಂದು ಸಾವಿರ ಟಿಕೇಟುಗಳನ್ನು ಮಾನ್ಯ ಸದಸ್ಯರಿಗೇ ಕೊಟ್ಟುಬಿಡುತ್ತೇನೆ. ಅವರೇ ತೆಗೆದುಕೊಂಡುಬಿಡಲಿ.

ಒಬ್ಬ ಮಾನ್ಯ ಸದಸ್ಯರು : ಕ್ರಿಕೆಟ್ ಆಟವನ್ನು ಸ್ಪೋರ್ಟಿವ್ ವಾಗಿ ತೆಗೆದುಕೊಳ್ಳಬೇಕು. ನೀವು ಈ ರೀತಿ ಆಟ ಆಡುವುದನ್ನು ಬೇರೆ ರೀತಿಯಲ್ಲಿ ತೆಗೆದುಕೊಂಡರೆ ಅದು ತಪ್ಪಾಗುತ್ತದೆ.

(ಮಾನ್ಯ ಅಧ್ಯಕ್ಷರು, ಅಧ್ಯಕ್ಷಸ್ಥಾನದಲ್ಲಿ ಉಪಸ್ಥಿತರಾದರು)

ಅಧ್ಯಕ್ಷರು : ಒಂದು ನಿಮಿಷ, ಕುಳಿತುಕೊಳ್ಳಿ. ನೀವು ಏನು ಹೇಳಿದಿರಿ?

ಶ್ರೀ ಅರಗ ಜ್ಞಾನೇಂದ್ರ : ಮಂತ್ರಿಗಳು ಟಿಕೇಟುಗಳನ್ನು ಮಾರಾಟ ಮಾಡುತ್ತಿವ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು : ಪತ್ರಿಕೆಯಲ್ಲಿ, ನೀವೇನು ಹೇಳಿದಿರಿ, You did not mention about press ಮಂತ್ರಿಗಳು ಸಾವಿರಾರು ಟಿಕೇಟ್ಟುಗಳನ್ನು ತರಿಸಿಕೊಂಡು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಿದ್ದಾರೆ ಎಂದರೆ what are you talking?

ಶ್ರೀ ಅರಗ ಜ್ಞಾನೇಂದ್ರ : ನಾನು ಪತ್ರಿಕೆಯಲ್ಲಿ ಅಂತ ಹೇಳಿದ್ದೇನೆ. ದಯವಿಟ್ಟು .....

MR SPEAKER : Please get the records. you don't seem to be interested in conducting the Assembly.

ಶ್ರೀ ಅರಗ ಜ್ಞಾನೇಂದ್ರ : ತಾವು ಬೇಜಾರು ಮಾಡಿಕೊಳ್ಳಬೇಡಿ. ನಾನು ಪತ್ರಿಕೆಯಲ್ಲಿ ಅಂತ ಮೆನಶನ್ ಮಾಡಿದ್ದೇನೆ.

MR SPEAKER : I am sorry. Iam not willing to conduct this Assembly in this fashion. Get the proceedings.

ಶ್ರೀ ಅರಗ ಜ್ಞಾನೇಂದ್ರ : ಪತ್ರಿಕೆಯಲ್ಲಿ ಬಂದಿರುವುದನ್ನು ಮೆನಶನ್ ಮಾಡಿದ್ದೇನೆ. ಇಡೀ ಸದನಕ್ಕೆ ಹೇಳಿದ್ದೇನೆ.

ಅಧ್ಯಕ್ಷರು : ನೀವೇನು ಹೇಳುತ್ತಿದ್ದೀರಿ, ಮಂತ್ರಿಗಳು ಯಾರು, ಶಾಸಕರು ಯಾರು? ನೀವೇ ಟಿಕೆಟ್ ತೆಗೆದುಕೊಳ್ಳುತ್ತೀರಿ, ನೀವೇ ಬ್ಲಾಕ್ ಮಾರ್ಕೆಟ್ ಮಾಡಿಕೊಳ್ಳುತ್ತೀರಿ. ನೀವೇ ಪರಸ್ಪರ ದೋಷಾರೋಪಣೆ ಮಾಡಿಕೊಳ್ಳುತ್ತೀರಿ. ಹೇಗೆ ಹೋಗುತ್ತೀರಿ ಹೊರಗಡೆ, ಸಮಾಜಕ್ಕೆ ನಿಮ್ಮ ಮುಖವನ್ನು ತೋರಿಸುವುದಕ್ಕೆ? ಇವತ್ತು ಶಾಸಕರಾಗಿದ್ದವರು ನಾಳೆ ಮಂತ್ರಿಯಾಗುತ್ತಾರೆ, ಮಂತ್ರಿಯಾಗಿದ್ದರು ನಾಳೆ ಇನ್ನೊಂದು ದಿವಸ ಶಾಸಕರಾಗುತ್ತಾರೆ. ಈ ರೀತಿ ಪರಸ್ಪರ ದೋಷಾರೋಪಣೆ ಮಾಡಿಕೊಂಡು ಸಮಾಜಕ್ಕೆ ಹೋಗಿ ನಿಮ್ಮ ಮುಖವನ್ನು ಯಾವರೀತಿ ತೋರಿಸುತ್ತೀರಿ? ನೀವು ಬ್ಲಾಕ್ ಮಾರ್ಕೆಟ್ ಮಾಡಿಕೊಳ್ಳುತ್ತೀರಿ ಅಂತ ನಿಮ್ಮ ಮೇಲೆ ನೀವೇ ಆರೋಪಣೆ ಮಾಡಿಕೊಳ್ಳುತ್ತೀರಾ.

ಶ್ರೀ ವಾಟಾಳ್ ನಾಗಾರಾಜ್ : ಇಲ್ಲಿ ಯಾರೂ ಸಾವಿರಾರು ಟಿಕೇಟುಗಳನ್ನು ಶಾಸಕರಾಗಲೀ, ಮಂತ್ರಿಗಳಾಗಲೀ ತಂದು ಪಂಚುಪಂಥ ಮಟ್ಟಕ್ಕೆ ಹೋಗಿಲ್ಲ. ಮತ್ತು ಅವರು ಪಾಸ್ ಕೊಟ್ಟರೂ ನಮ್ಮಲ್ಲಿ

ಹೋಗುವ ಮಟ್ಟಕ್ಕೆ ಯಾರೂ ಇಲ್ಲವೆಂದು ಕಾಣುತ್ತದೆ. ಟಿಕೆಟ್ ತೆಗೆದುಕೊಂಡಿಲ್ಲ ಎಂದಮೇಲೆ ಕೊಡುವುದು ಎಲ್ಲಿಂದ ಬರುತ್ತದೆ? ಈ ಒಂದು ಕ್ರಿಕೆಟ್ ಸಂಸ್ಥೆ ಬಹಳ ಗೌರವಾನ್ವಿತ ಸಂಸ್ಥೆ.

12.00 ಪಿ.ಎಂ.

ಕರ್ನಾಟಕ ರಾಜ್ಯದಲ್ಲಿ ಆ ಸಂಸ್ಥೆಗೆ ಒಂದು ಹೆಸರು ಇದೆ. ಶ್ರಮಜೀವಿಗಳು, ಶ್ರಮಪಟ್ಟ ಕಟ್ಟಡಂಥ ಮಹತ್ತರವಾದಂಥ ಸಂಸ್ಥೆ. ಆ ಸಂಸ್ಥೆ ಕರ್ನಾಟಕದಲ್ಲಿರತಕ್ಕಂಥಾದ್ದೇ ಒಂದು ಗೌರವ. ನಮ್ಮಲ್ಲಿ ಎಂತೆಂತಹ ಆಟಗಾರರನ್ನು ತಯಾರು ಮಾಡುತ್ತದೆ ಆ ಸಂಸ್ಥೆ ಎಂದರೆ ಒಳ್ಳೊಳ್ಳೆಯ ಆಟಗಾರರು. ಪ್ರಸನ್ನರಂತಹ 4 ಜನ ಇವತ್ತೂ ಸಹ ಈ ಪ್ರಪಂಚದಲ್ಲೇ ಉನ್ನತವಾದಂಥ ಸ್ಥಾನವನ್ನು ಪಡೆದಿರತಕ್ಕ ವ್ಯಕ್ತಿಗಳನ್ನು ತಯಾರು ಮಾಡಿರತಕ್ಕಂಥವರು. ಶ್ರೀಮಾನ್ ಜೆ.ಜಿ.ಮಲ್ಲಾರಾಧ್ಯರ ಕಾಲದಿಂದ ಶ್ರೀಮಾನ್ ಚಿನ್ನಸ್ವಾಮಿ ಸ್ಟೇಡಿಯಂ ಎಂದು ಏಕೆ ಇಟ್ಟಿದ್ದೇವೆಂದರೆ, ಚಿನ್ನಸ್ವಾಮಿಯವರು ತಮ್ಮ ಬೆವರನ್ನು ಸುರಿಸಿ, ಅಲ್ಲಿ ಕಟ್ಟಿರತಕ್ಕಂತಾದ್ದು. ಚಿನ್ನಸ್ವಾಮಿ ಇದ್ದಾರೆ ಮತ್ತು ತಿಮ್ಮಪ್ಪಯ್ಯ ಎಂದು ಈಗ ಅಧ್ಯಕ್ಷರಾಗಿದ್ದಾರೆ. ಸಿ. ನಾಗಾರಾಜು ಎಂಬುವರು ಸೆಕ್ರಟರಿಯಾಗಿದ್ದಾರೆ. ಇದು ನಿಜ, ಸ್ವಲ್ಪ ಹೆಚ್ಚು ಕಮ್ಮಿ ಆಗಬಾಹುದು. ಆದರೆ, ಇಂತಹ ಒಂದು ವಿಶ್ವಕಪ್ ಇಲ್ಲಿ ನಡೆಯತಕ್ಕಂತಾದ್ದೇ ನಮ್ಮ ರಾಜ್ಯದ ಗೌರವವೆಂದು ನಾವು ಅಂದುಕೊಳ್ಳಬೇಕು.ಇಲ್ಲಿ ನಾವ್ಯರೂ, ಸದಸ್ಯರುಗಳಾಗಲೀ ಅಥವಾ ಮಂತ್ರಿಗಳಾಗಲೀ ನೂರಾರು, ಸಾವಿರಾರು ಟಿಕೆಟುಗಳನ್ನು ತೆಗೆದುಕೊಂಡಿರುವ ಪ್ರಶ್ನೆಯಿಲ್ಲ. ಅಥವಾ ಗವಾಸ್ಕರ್ ಆಗಲೀ, ಕಪಿಲ್ ದೇವ್ ಆಗಲೀ, ಯಾರಾದರೂ ಬಂದು ಸ್ವಲ್ಪ ಟಿಕೆಟ್ ಕೊಡಿ ಎಂದು ಕೇಳಿದರೆ, ಈ ಪ್ರಪಂಚದಲ್ಲೇ ಹೆಸರು ಪಡೆದಂತಹವರಿಗೆ, ಟಿಕೆಟ್ ಕೊಡುವುದೇ ತಪ್ಪು ಎನ್ನತಕ್ಕ ವಾದ ಇದೆಯಲ್ಲ, ಅದು ಸರಿಯಾದುದಲ್ಲ. ಅವರು ಬಹಳ ಉನ್ನತವಾದಂಥಮಟ್ಟಕ್ಕೆ ಏರತಕ್ಕಂತಹವರು. ಆ ಸಂಸ್ಥೆ ಕರ್ನಾಟಕದಲ್ಲಿರುವುದೇ ನಿಜವಾದಂಥ ಗೌರವ ಎನ್ನತಕ್ಕಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೊಂದು ಆಹ್ವಾನ ಬಂತು, ತಮಗೆ ಹೇಳುತ್ತೇನೆ. ನನ್ನನ್ನು ಊಟಕ್ಕೂ ಕರೆದಿದ್ದರು. ನಾನು ಪ್ರಮಾಣವಾಗಿಯೂ ಹೋಗಲಿಲ್ಲ. ಯಾರು ಅಲ್ಲಿ ಹೋಗಿ, ಕುಳಿತುಕೊಂಡು, 8 ಗಂಟೆಗೆ ನೋಡಿಕೊಂಡು ಬರುವುದು ಎಂದು ಅಂದರೆ ನಾನು ಅದನ್ನು ಅಲ್ಲಗಳೆಯುತ್ತಾ ಇಲ್ಲ. ನಿನ್ನೆ ಬ್ಯಾಂಡಿಟಿ ಕ್ವೀನ್ ಚಿತ್ರ ನೋಡಲು ಬನ್ನಿ ಎಂದು ನಮಗೆಲ್ಲರಿಗೂ ಹೇಳಿದರು. ನಾವ್ಯಾರೂ ಹೋಗಲೇ ಇಲ್ಲ. ಶಾಸಕರು ಕೈಕೊಟ್ಟರು ಎಂದು ಪತ್ರಿಕೆಯಲ್ಲಿ ಬಂದಿದೆ. ನಿಜ, ನಾವು ಕೈಕೊಟ್ಟಿರುವುದು ನಿಜ. ನಾವಂತು ಹೋಗಲಿಲ್ಲ.ಅದು ಸತ್ಯ. ಆದ್ದರಿಂದ, ನಮ್ಮ ಹಣೆಬರಹಗಳೇ ಹೀಗಾಗಿರುವಾಗ ಇದೆಲ್ಲಾ ಯಾವ ಮೊಡ್ಡದು.

ಶ್ರೀ ಪಿ.ಜಿ. ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಈ ಕ್ರಿಕೆಟ್ ಅಸೋಸಿಯೇಷನ್ ವಿಚಾರದಲ್ಲಿ, ಅವರ ಆಡಳಿತ ವಿಚಾರಗಳಲ್ಲಿ ಸರ್ಕಾರಕ್ಕೆ ಕೃಪಾಕಲಿಕ್ಕೆ ಬರುವುದಿಲ್ಲ. ಅದೊಂದು ಸ್ವತಂತ್ರ, ಸ್ವಾಯುತ್ತ ಸಂಸ್ಥೆ. ಕರ್ನಾಟಕ ರಾಜ್ಯದಲ್ಲಿ, ವಿಶ್ವದ ಉದ್ದಗಲಕ್ಕೂ ಸಹಿತ ಅನೇಕ ಕ್ರೀಡಾಪಟುಗಳನ್ನು ಬೆಳೆಸಿರತಕ್ಕಂಥ ಒಂದು ಸಂಸ್ಥೆ. ಅದರ ಆಡಳಿತದಲ್ಲಿ ಪ್ರತಿಯೊಂದು ಹಂತದಲ್ಲೂ ಸಹಿತ ನಾವು ಕೈ ಹಾಕುವುದಕ್ಕಾಗುವುದಿಲ್ಲ. ಕೇಂದ್ರಸರ್ಕಾರದವರು ರಾಜ್ಯಸರ್ಕಾರಕ್ಕೆ ಪತ್ರವನ್ನು ಬರೆದು,ಆ ಒಂದು ನಡೆಯುತ್ತಿರತಕ್ಕ ಕ್ರಿಕೆಟ್

ಮ್ಯಾಚ್ ಏನಿದೆ, ಅದಕ್ಕೆ ಸಂಬಂಧಪಟ್ಟಂಥ ರಕ್ಷಣೆ ಮತ್ತು ಅದಕ್ಕೆ ಸಂಬಂಧಪಟ್ಟ ಹಾಗೆ ವಿದೇಶಗಳಿಂದ ಬಂದಿರತಕ್ಕ ತಂಡಗಳಿಗೆನಿವೆ, ಅವರ ರಕ್ಷಣೆ ದೃಷ್ಟಿಯಿಂದ, ಕ್ರಿಕೆಟ್ ಮ್ಯಾಚ್ ನಡೆಸುವ ದೃಷ್ಟಿಯಿಂದ ಮಾತ್ರ ವಿಶೇಷವಾಗಿ ಜವಾಬ್ದಾರಿ ತಗಮಕೊಳ್ಳಬೇಕೆಂದು ತಿಳಿಸಿದ್ದಾರೆ. ಅವರ ಸೂಚನೆ ಪ್ರಕಾರವಾಗಿ ಮತ್ತು ನಮ್ಮರಾಜ್ಯಸರ್ಕಾರದ ಅಡಿಷನಲ್ ಚೀಫ್ ಸಕ್ರಟರಿ ಮತ್ತು ಹೋಮ ಇಲಾಖೆಯ ಪ್ರಿನ್ಸಪಲ್ ಸಕ್ರಟರಿ ಇವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮಾಡಿ ಪೂಲೀಸ್ ಕಮೀಷನರು, ಡಿ.ಜಿ.ಪಿ. ಯವರು, ಕ್ರಿಕೆಟ್ ಅಸೋಸಿಯೇಷನ್ ಪ್ರತಿನಿಧಿಗಳು, ಇವರೆಲ್ಲರೂ ಸಭೆಯಲ್ಲಿ ಭಾಗವಹಿಸಿದ್ದರು. ರಕ್ಷಣೆ ವಿಚಾರದಲ್ಲಿ, ಸೆಕ್ಯುರಿಟಿ ಪಾಯಿಂಟ್ ವಿಚಾರದಲ್ಲಿ, ಏನೇನು ಮಾಡಬೇಕು,ಅದೆಲ್ಲವನ್ನೂ ಸಹಿತ ನಾವು ಮಾಡಿದ್ದೇವೆ. ಎರಡನೆಯದಾಗಿ, ಟಿಕೆಟ್ ಕೊಡತಕ್ಕ ವಿಚಾರದಲ್ಲಿ, ಯಾರು ಯಾರಿಗೆ ಎಷ್ಟೆಷ್ಟು ಕೊಡುತ್ತೇವೆ ಎನ್ನುವುದನ್ನು, ಮಾನ್ಯ ಕ್ರಿಕೆಟ್ ಸಂಸ್ಥೆಯ ಪದಾಧಿಕಾರಿಗಳು, ಸರ್ಕಾರಕ್ಕೆ ತಿಳಿಸಿದ್ದಾರೆ. ಒಟ್ಟು 50 ಸಾವಿರ ಟಿಕೆಟ್‌ಗಳ ಕೆಪಾಸಿಟಿ ಅಲ್ಲಿರತಕ್ಕಂತಾದ್ದು. ಅದರಲ್ಲಿ ಸೇಲಬಲ್ ಟಿಕೆಟ್ಸ್ 40 ಸಾವಿರ. ಇನ್ನು 10 ಸಾವಿರ ಟಿಕೆಟ್ಸು ಅವರ ಅಸೋಸಿಯೇಷನ್ ನವರಿಗೆ ಕೊಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ಉಳಿದಿರತಕ್ಕಂಥ 40ಸಾವಿರದಲ್ಲೂ ಸಹಿತ 6 ಸೌತ್ ಜೋನ್ ಅಸೋಸಿಯೇಷನ್‌ನವರಿಗೆ ಒಂದೂವರೆ ಸಾವಿರ ಕೊಡಬೇಕು. 24 ಕ್ರಿಕೆಟ್ ಅಸೋಸಿಯೇಷನ್ ನವರಿಗೆ 25 ರಂತೆ, ಆರುನೂರು ಕೊಡಬೇಕು. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಸದಸ್ಯರಿಗೆ 8 ಸಾವಿರ ಟಿಕೆಟ್. ಇದೆಲ್ಲವೂ ದುಡ್ಡಿಗೆ ಮಾರಾಟ ಮಾಡುವುದು. ಪುಕ್ಕಟೆ ಕೊಡುವಂತಾದ್ದಲ್ಲ. ಅದೇ ರೀತಿಯಾಗಿ ಕ್ರಿಕೆಟ್ ಮ್ಯಾಚಿಗೆ ಪ್ರಾಯೋಜಕತ್ವ ವಹಿಸಿರುವವರು ಯಾರಿದ್ದಾರೆ, ಅವರಿಗೆ ಸುಮಾರು 2 ಸಾವಿರ ಟಿಕೆಟ್ ಕೊಡಬೇಕು. ಮತ್ತು ಸಪ್ಲೈಯರ್ಸ, ಕಂಟ್ರಾಕ್ಟರ್ಸಗೆ ಒಂದು ಸಾವಿರ ಟಿಕೆಟ್ಸು ಕೊಡಬೇಕು. ಹೀಗೆ ಎಲ್ಲಾ ಬಿಟ್ಟು ಸುಮಾರು 20 ಸಾವಿರ ಟಿಕೆಟುಗಳನ್ನು ಮಾರಾಟ ಮಾಡುವುದಕ್ಕೆ ಸಿಗುತ್ತವೆ ಎನ್ನುವ ವಿಚಾರವನ್ನು ಸರ್ಕಾರದ ಈ ಒಂದು ಸಭೆಯಲ್ಲಿ ಅದರ ಮುಖ್ಯ ಕಾರ್ಯದರ್ಶಿಯವರಿಗೆ, ಅಸೋಸಿಯೇಷನ್‌ನವರು ತಿಳಿಸಿದ್ದಾರೆ. ನಿನ್ನೆ ದಿನ ಟಿಕೆಟ್ ಮಾರಾಟ ಮಾಡತಕ್ಕ ಸಂದರ್ಭದಲ್ಲಿ, ಪೂಲೀಸರು ಸಂಗ್ರಹ ಮಾಡಿರತಕ್ಕ ಮಾಹಿತಿ ಪ್ರಕಾರವಾಗಿ ಮತ್ತು ಕ್ರಿಕೆಟ್ ಅಸೋಸಿಯೇಷನ್ ನವರು ಹೇಳಿರತಕ್ಕ ಮಾಹಿತಿ ಪ್ರಕಾರವಾಗಿ, ಸುಮಾರು 11 ರಿಂದ 12 ಸಾವಿರ ಟಿಕೆಟನ್ನು ಮಾರಾಟ ಮಾಡಿದ್ದಾರೆ. ಇನ್ನೂ 7-8 ಸಾವಿರ ಟಿಕೆಟ್‌ಗಳನ್ನು ಅವರಿಗೆ ಸಂಬಂಧಪಟ್ಟ ಹಾಗೆ, ಅಲಾಟ್ ಮಾಡಿಕೊಳ್ಳ ತಕ್ಕಂಥದ್ದು ಉಳಿದಿದ ಎನ್ನುವಂತಾದ್ದನ್ನು ಈಗಾಗಲೇ ನಮಗೆ ತಿಳಿಸಿದ್ದಾರೆ. ಸ್ವಾಭಾವಿಕವಾಗಿ ಕ್ರಿಕೆಟ್ ಮ್ಯಾಚ್‌ನ್ನು ನೋಡಬೇಕೆಂಬ ಎಂಥೂಸಿಯಾಸಂ ಬಹಳ ಜನಗಳಿಗೆ ಇರುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. ಆದರೂ ನಾನು, ಈ ಟಿಕೆಟ್ ಕೊಡತಕ್ಕ ವಿಚಾರದಲ್ಲಿ, ಅನ್ಯಾಯವಾಗಿದೆ ಎನ್ನುವಂತಾದ್ದನ್ನು ಗೌರವಾನ್ವಿತ ಸದಸ್ಯರು ಏನು ಹೇಳಿದ್ದಾರೆ, ಇದರ ಬಗ್ಗೆ ಒಬ್ಬರು ಉನ್ನತ ಮಟ್ಟದ ಅಧಿಕಾರಿಯಿಂದ ವಿಚಾರಣೆ ಮಾಡತಕ್ಕ ಭರವಸೆಯನ್ನೂ ಸಹಿತ ಈ ಸದನಕ್ಕೆ ತಮ್ಮ ಮೂಲಕ ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ : ದಯಮಾಡಿ, ನಾನು ಮಾತನಾಡುವಾಗ, ತಮ್ಮ ಮನಸ್ಸಿಗೆ, ಬೇಸರ ಮಾಡಬೇಕೆನ್ನುವುದು ಖಂಡಿತ ನನ್ನ ಉದ್ದೇಶ ಅಲ್ಲ. ತಮ್ಮಂತಹವರ ಮಾರ್ಗದರ್ಶನದಲ್ಲಿ ಸುಮಾರು ಒಂದು ವರ್ಷದಿಂದ ನಾನು ಇಲ್ಲಿ ಕೆಲಸ ಮಾಡುತ್ತಿದ್ದೇನೆ. ಯಾವುದೇ ರೀತಿ ಬ್ಯಾಲೆನ್ಸ ತಪ್ಪಿ ನಾನು

ಮಾತನಾಡಲಿಲ್ಲ. ದಯಮಾಡಿ, ತಾವು ಆ ಪ್ರೊಸೀಡಿಂಗ್ಸ್ ತರಿಸಿ, ಹೇಳಬೇಕು. ನನ್ನ ಮನಸ್ಸಿಗೂ ಕೂಡ ನೋವಾಗಿದೆ. ತಮಗೆ ಬೇಸರವಾಗಿ ಈ ಸದನದಲ್ಲಿ ಹೇಳಿದಿರಿ. ದಯಮಾಡಿ, ಅದನ್ನು ತರಿಸಿ ಕ್ಲಿಯರ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ತಮ್ಮಲ್ಲಿ ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಪರಸ್ಪರ ಆರೋಪಣೆಗಳನ್ನು ಮಾಡಿಕೊಳ್ಳುವಾಗ, ಯಾವುದಾದರೊಂದು ವಿಚಾರ ವ್ಯಕ್ತಮಾಡುವಾಗ, ನಾವು ಯಾವುದೋ ಒಂದು ಮಿತಿಯನ್ನು ಇಟ್ಟುಕೊಂಡಿರಬೇಕು. ನೀವು ಮಾತನಾಡಿದ ಮಾತುಗಳನ್ನು ಅಲ್ಲಿ ಕೇಳಿ ನಾನು, ಧಾವಿಸಿ ಓಡಿ ಬಂದೆ. ಸಾವಿರಾರು ಟಿಕೆಟ್‌ಗಳನ್ನು ತರಿಸಿಕೊಂಡು, ಮಂತ್ರಿಗಳು, ಅಧಿಕಾರಿಗಳು ಬ್ಲಾಕ್ ಮಾರ್ಕೆಟ್ ನಲ್ಲಿ ಮಾರುತ್ತಿದ್ದಾರೆಂದೆರೆ.....

ಶ್ರೀ ಆರಗ ಜ್ಞಾನೇಂದ್ರ : ಪತ್ರಿಕೆಯಲ್ಲಿ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಆ ಪತ್ರಿಕೆ ಕೂಡ ತಮಗೆ ಕಳುಹಿಸಿದ್ದೇನೆ.

ಅಧ್ಯಕ್ಷರು : ಪತ್ರಿಕೆಯಲ್ಲೇ ಆಗಲೀ, ಅದನ್ನು ಉಲ್ಲೇಖ ಮಾಡಿ ಮಾತನಾಡತಕ್ಕಂಥಾದ್ದು, ಸರಿಹೋಗುವುದಿಲ್ಲ. ಮಂತ್ರಿಗಳು ಯಾರು? ಶಾಸಕರು ಯಾರು? ಮೂಲಭೂತವಾಗಿ ಈ ಸಭೆಯಲ್ಲಿರುವವರೆಲ್ಲರೂ ಶಾಸಕರೇ. ನಿಮ್ಮನ್ನು ನೀವು, ಒಬ್ಬರನ್ನೊಬ್ಬರು ಆ ರೀತಿ ಮಾತನಾಡಿಕೊಂಡರೆ, ನಾಳೆ ನಾವು ಯಾರೂ ಓಡಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ನಮ್ಮ ಪರಿಸ್ಥಿತಿ, ರಾಜಕಾರಣಿಗಳ ಪರಿಸ್ಥಿತಿ ಏನಾಗಿದೆಯೆಂದರೆ, ನಮ್ಮ ಮಕ್ಕಳು ಕೂಡ ಸೋಷಿಯಲ್ ಫಂಕ್ಷನ್‌ಗಳಲ್ಲಿ ಹೋಗಿ ನಾವು ಎಂ.ಎಲ್.ಎ. ಮಕ್ಕಳು, ಮಂತ್ರಿಗಳ ಮಕ್ಕಳು, ಸ್ಪೀಕರೆ ಮಕ್ಕಳು ಎಂದು ಹೇಳಿಕೊಳ್ಳುವ ಹಾಗಿಲ್ಲ. ಕಳ್ಳರು ಕಾಕರನ್ನು ನೋಡಿದ ಹಾಗೆ ನಮ್ಮನ್ನು ನೋಡುತ್ತಾರೆ. ನಮ್ಮ ಪರಿಸ್ಥಿತಿ ಅಲ್ಲಿಗೆ ಬಂದು ನಿಂತಿದೆ. ಸಾರ್ವಜನಿಕ ಜೀವನದಲ್ಲಿ ಇನ್ನಷ್ಟು ಹಗುರ ಆಗುವುದು ಬೇಡ. ಏನಾದರೂ ಮಾಡಿ, ನಾವು ಪ್ರಯತ್ನ ಪಡೋಣ, ಸ್ವಲ್ಪ ಮೇಲೆತ್ತುವುದಕ್ಕೆ ಪ್ರಯತ್ನ ಮಾಡೋಣ ಎನ್ನುವ ದೃಷ್ಟಿಯಿಂದ ಹೇಳಿದೆ ಅಷ್ಟೆ. ನಾನು ಆವೇಶದಲ್ಲಿ ಸ್ವಲ್ಪ ರಭಸವಾಗಿ ಮಾತನಾಡಬಹುದು. ದಯಮಾಡಿ ತಪ್ಪಾಗಿ ಭಾವಿಸಬೇಡಿ. You are all like my Younger brothers. ನಾನು ಸರ್ಟಿಕ್ಯುಲರ್ ಆಗಿ ಕೇರ್ ತೆಗದುಕೊಂಡಿದ್ದೇನೆ. ನಿಮ್ಮನ್ನು ನರ್ಸ ಮಾಡುವುದಕ್ಕೆ, ನಿಮಗೆ ಅವಕಾಶಗಳನ್ನು ಕೊಡುವುದಕ್ಕೆ ನನ್ನ ಒಟ್ಟು ಅಭಿಪ್ರಾಯವೇನೆಂದರೆ, We should not... ಇದಕ್ಕೆ ಮತ್ತೆ ಇನ್ನಷ್ಟು ಕೀಳಾಗಿ, ಜನರ ದೃಷ್ಟಿಯಿಂದ ಕಾಣಬಾರದು ಎಂದು ಹೇಳಿದೆ. Please don't take it seriously. Please don't get offended. I never had any intention when I said that.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ಇದೇ ವಿಚಾರದಲ್ಲಿ ತಮ್ಮ ಅನುಮತಿಯನ್ನು ಕೋರಿ, ಮಾನ್ಯ ಗೌರವಾನ್ವಿತ ಸದಸ್ಯರು ಒಂದು ಆಪಾದನೆಯನ್ನು ಮಾಡಿದ್ದಾರೆ. ಒಂದು ಪತ್ರಿಕೆಯಲ್ಲೂ ಸಹಿತ ಇದು ವರದಿಯಾಗಿದೆ. ನನಗೆ ತಿಳುವಳಿಕೆ ಇರುವ ಹಾಗೆ ನನಗೆ ಖಚಿತವಾಗಿ ಗೊತ್ತಿದೆ. ಯಾವುದೇ ಮಂತ್ರಿಗಳಾಗಲೀ, ಒಂದು ಸಾವಿರ ಅಲ್ಲ, ಯಾವುದೇ ಟಿಕೆಟ್‌ನ್ನು ಕೊಡಬೇಕೆಂದು ಅಸೋಸಿಯೇಷನ್ ನವರಿಗೆ, ಅನ್ ಆಫಿಷಿಯಲ್ ಆಗಿ, ಕೇಳಿಯೂ ಇಲ್ಲ ಅವರು ಕೊಟ್ಟೂ ಇಲ್ಲ. ಇದನ್ನು ಸ್ಪಷ್ಟವಾಗಿ ನಾನು ನಿರಾಕರಿಸುತ್ತೇನೆ.

ಅಧ್ಯಕ್ಷರು : ನೀವು ಅದರ ಬಗ್ಗೆ, ಆ ರೀತಿ ಅಪರಾಧಿ ಮನೋಭಾವನೆಯಿಂದೇನೂ ಮಾತನಾಡಬೇಕಾಗಿಲ್ಲ. ಮಂತ್ರಿಗಳಾಗಲೀ, ಶಾಸಕರಾಗಲೀ, ವಿರೋಧ ಪಕ್ಷದ ನಾಯಕರಾಗಲೀ ಕ್ರಿಕೆಟ್ ಮ್ಯಾಚ್ ಎಂದರೆ ಒಂದು ಅಪೂರ್ವವಾದಂಥ ಘಟನೆ. ನೀವು ಒಂದು ಸ್ಥಾನದಲ್ಲಿದ್ದೀರಿ ಎಂದು 4 ಟಿಕೆಟ್ ಬೇಕು, 5 ಟಿಕೆಟ್ ಬೇಕೆಂದು ಯಾರಾದರೂ ಕೇಳುವುದೇನೂ ದೊಡ್ಡ ತಪ್ಪಲ್ಲ. ನಿಮ್ಮ ಮಕ್ಕಳು ಇರುತ್ತಾರೆ, ನಿಮ್ಮ ಮಕ್ಕಳ ಸ್ನೇಹಿತರು ಇರುತ್ತಾರೆ. ನಿಮ್ಮ ಆಪ್ತರಿಗೆ ಹೇಳಿ ಕೊಡಿಸಿ ಎಂದು ಕೇಳುತ್ತಾರೆ. ಅಥವಾ ಯಾರೋ ಬೇಕಾದವರು ಇರುತ್ತಾರೆ. ಫ್ರೆಂಡ್ಸ್ ಇರುತ್ತಾರೆ. ಏನೋ 5-6 ಟಿಕೆಟ್ ತರಿಸಿ ಕೊಡುವುದರಿಂದ, ದೊಡ್ಡ ಅಪರಾಧ ಏನೂ ಮಾಡಿದಹಾಗೆ ಆಗುವುದಿಲ್ಲ. ದುಡ್ಡು ಕೊಟ್ಟು ಟಿಕೆಟ್ ತರಿಸಿಕೊಡತಕ್ಕಂಥಾದ್ದು. ಸಾರ್ವಜನಿಕ ಜೀವನದಲ್ಲಿದ್ದಾಗ ಇವೆಲ್ಲಾ ಸಹಜ. ಅದಕ್ಕೆ ಏಕೆ ನಾವು, Why should be become guilty.

ಶ್ರೀ ಜೆ.ಪಟೇಲ್ : ಆ ರೀತಿ ಬಂದವರಿಗೆ ನಾನೇನು ಹೇಳಿದ್ದೇನೆಂದರೆ, ನಿಮ್ಮ ಮನೆಯೊಳಗೆ ಟಿ.ವಿ. ನೋಡಿ, ಸ್ಟೇಡಿಯಂಗೆ ಹೋಗುವುದೇ ಬೇಕಾಗಿಲ್ಲ. ಟಿ.ವಿ. ಬಂದ್ ಆಗದ ಹಾಗೆ ಎಲೆಕ್ಟ್ರಿಸಿಟಿ ಕೊಡುತ್ತೇವೆಂದು ಹೇಳಿದ.

ಶ್ರೀ ವಾಟಾಳ್ ನಾಗರಾಜ್ : ಒಂದು ಸತ್ಯ ಏನೆಂದರೆ, ಉಪ ಮುಖ್ಯಮಂತ್ರಿಗಳಿಂದ ಒಂದು ಸ್ಪಷ್ಟ ಭರವಸೆ ಬಂತು. ಈ ಕ್ರಿಕೆಟ್ ಸಂದರ್ಭದಲ್ಲಿ ಏನೇ ಕಷ್ಟವಾದರೂ ಸಹಿತ ಕರೆಂಟ್ ಮಾತ್ರ ಕೊಡುತ್ತೇವೆಂದು ಅಕಸ್ಮಾತ್ ಶಾಸನ ಸಭೆಯಲ್ಲಿ ಒಂದೊಂದು ಸಾರಿ ಕರೆಂಟ್ ಕಟ್ಟುಹೋಗುತ್ತೆ. ಆಗ ಏನು ಮಾಡುತ್ತೀರಿ ?

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಚರ್ಚೆ

(ಮುಂದುವರೆದದ್ದು)

+ಶ್ರೀ ಮಾರುತಿ ರಾವ್ ಪವಾರ್(ನರಸಿಂಹರಾಜ) : ಸನ್ಮಾನ್ಯ ಸಭಾಧ್ಯಕ್ಷರೇ ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮೇಲೆ ತಾವು ನನಗೆ ಕೊಟ್ಟಿರತಕ್ಕ ಅವಕಾಶದಲ್ಲಿ, ನಾನು ವ್ಯರ್ಥವಾಗಿ ಕೆಲವು ವಿಚಾರಗಳನ್ನು ಮಾತನಾಡದೇ, ಕೆಲವು ಮುಖ್ಯವಾದಂಥ ಅಂಶಗಳನ್ನು ಮಾತ್ರ ಪ್ರಮುಖವಾಗಿ ತಮ್ಮ ಮೂಲಕ ಸರ್ಕಾರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ನಮ್ಮರಾಜ್ಯಸರ್ಕಾರ ಹೇಗೆ ವಿಫಲತೆಯನ್ನು ಕಾಣುತ್ತಾ ಇದೆ ಎನ್ನುವ ಹಿನ್ನೆಲೆಯಲ್ಲಿ ನಾನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತಿರುವಂಥ ಪ್ರಮುಖವಾದ ಅಂಶವೆಂದರೆ, ನಮ್ಮ ಶಿಕ್ಷಣ ಮಂತ್ರಿಗಳ ಖಾತೆಯಿಂದ, ಖಾಸಗಿ ಶಿಕ್ಷಣ ಸಂಸ್ಥಗಳಿಗೆ, ಸರ್ಕಾರದಿಂದ ಒಂದು ನಿರ್ಬಂಧದ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದಾರೆ. ಆ ಸುತ್ತೋಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥಗಳಲ್ಲಿ ಶಾಲೆಗಳ ಒಂದು ಕಟ್ಟಡ ಇರಬಹುದು, ಆ ಶಾಲೆಗಳನ್ನು ನಡೆಸತಕ್ಕ ವ್ಯವಸ್ಥೆ ಹೇಗಿರಬೇಕೆಂಬ ಒಂದು ಸುತ್ತೋಲೆಯನ್ನು ಸರ್ಕಾರದವರು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಅದರ ಒಂದು ಪ್ರತಿಯ ಪ್ರಕಾರ, ಒಂದು ಖಾಸಗಿ ಶಿಕ್ಷಣ ಸಂಸ್ಥೆ ತನ್ನ ಕಟ್ಟಡ ಸಂಪೂರ್ಣ ಆರ್.ಸಿ.ಸಿ.ಯನ್ನು ಹೊಂದಿರಬೇಕು, ಪ್ರತಿ